ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ಹೌದು

ಆ) ಆರ್ಥಿಕ ಅಡಚಣೆಯಿಂದ ಹೊಸ ಕಟ್ಟಡಗಳ ನಿರ್ಮಾಣ ಕಾರ್ಯ ಸಧ್ಯಕ್ಕೆ ಆರಂಭಿಸಂತಿಲ್ಲ.

ಅಂತರ್ ಜಿಲ್ಲಾ ಮೇವು ಹುಲ್ಲು ಸಾಗಾಣಿಕೆ ಬಗ್ಗೆ

೧೧೭೦. ಶ್ರೀ ವಿನಯಕುಂಪಾರ್ ಸೊರಕೆ (ಪುತ್ತೂರು).—ಮಾನ್ಯ ಆಹಾರ ಮಂತ್ರಿ ನಾಗರಿಕ ಸರಬರಾಜು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸಂವರೆ ?

ಅ) ಮೇವು ಸಾಗಾಣಿಕೆಯಂ ಮಟ್ಟಿಗೆ ಅಂತರ್ ಜಿಲ್ಲಾ ನಿರ್ಭಂಧವಿದೆಯೇ?

ಆ) ಹೊರಗಡೆಯ ಮೇವನ್ನೇ ಅವಲಂಬಿಸಿರುವ ಪುತ್ತೂರು ತಾಲ್ಲೂಕಿನ ಮೇವು ಸಾಗಾಣಿಕೆಯ ವಾಹನಗಳಿಗೆ ಅಧಿಕಾರಿಗಳು ಕಿರುಕುಳ ಕೊಡುತ್ತಿರಲು ಕಾರಣವೇನು ?

ಇ) ಪುತ್ತೂರು ತಾಲ್ಲೂಕಿಗೆ ಮೇವು ಸಾಗಾಣಿಕೆಯಂ ಮಟ್ಟಿಗೆ ಸೂಕ್ತವಾದ ನಿರ್ದೇಶನ ಸಂಬಂಧಪಟ್ಟ ಅಧಿಕಾರಿಗಳಿಗೆ ನೀಡಲಾಗುವುದೇ ?

ಶ್ರೀ ಸಿದ್ದರಾಮಯ್ಯ.(ಪಶುಸಂಗೋಪನಾ ಹಾಗು ಪಶು ವೈದ್ಯ ಸೇವೆಗಳ ರಾಜ್ಯ ಮಂತ್ರಿಗಳು).—

ಅ) ಇಲ್ಲ.

ಆ) ಕಿರುಕುಳ ಕೊಡುತ್ತಿರುವ ಪ್ರಸಂಗಗಳು ಗಮನಕ್ಕೆ ಬಂದಿರುವುದಿಲ್ಲ.

ಇ) ನೀಡಿದೆ.

ಆಂಗ್ಲ ಪ್ರವೀಣ ದರ್ಜೆ ಶೀಘ್ರಲಿಪಿಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳ ಬಗ್ಗೆ

೧೫೧೩. ಶ್ರೀ ಆರ್. ವೆಂಕಟರಾಮಯ್ಯ (ಮಂಳಬಾಗಿಲು).—ಮಾನ್ಯ ಶಿಕ್ಷಣ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೆ ?

ಅ) ೧೯೮೫ರ ನವೆಂಬರ್ ಪರೀಕ್ಷೆಯಲ್ಲಿ ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ ಹಾಗೂ ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆಗೆ ಕುಳಿತ ಅಭ್ಯರ್ಥಿಗಳ ಸಂಖ್ಯೆ ಎಷ್ಟು ?

ಆ) ಅವರಲ್ಲಿ ತೇರ್ಗಡೆಯಾದವರ ಸಂಖ್ಯೆ ಎಷ್ಟು ?

ಇ) ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆಯ ಸಿನೇ ಪ್ರಶ್ನೆ ಪತ್ರಿಕೆಯಲ್ಲಿ ಹೆಚ್ಚು ಮುಂದಿನಪಾಸಾಗಿರುವುದು ನಿಜವೇ ?

ಈ) ತೇರ್ಗಡೆಯಾದವರ ಸಂಖ್ಯೆಯನ್ನು ಆದಷ್ಟು ಕಡಿಮೆ ಮಾಡಲೋಸುಗವಾಗಿಯೇ ಸಿನೇ ಪ್ರಶ್ನೆ ಪತ್ರಿಕೆಯಲ್ಲಿ ಕೆಲವಷ್ಟು ಅಂಕಗಳನ್ನು ಕಡಿಮೆ ಮಾಡಲಾಗಿದೆ ಎಂಬ ಆಂಶ ನಿಜವೇ ?

ಉ) ಹಾಗಿಲ್ಲದಿದ್ದಲ್ಲಿ ಸಿನೇ ಪ್ರಶ್ನೆ ಪತ್ರಿಕೆಯ ಮೌಲ್ಯಮಾಪನಕ್ಕೆ ಗೊತ್ತುಪಡಿಸಿರುವ ಮಾನದಂಡವೇನು ?

ಊ) ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ ಹಾಗೂ ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆಗೆ ಹೋಲಿಸಿದಲ್ಲಿ ಕಡಿಮೆ ಸಂಖ್ಯೆಯ ಅಭ್ಯರ್ಥಿಗಳು ಆಂಗ್ಲ ಶೀಘ್ರಲಿಪಿಯಲ್ಲಿ ತೇರ್ಗಡೆಯಾಗಿರಲು ಕಾರಣವೇನು ?

ಶ್ರೀ ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ೧) ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ – ೧೨೩

೨) ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ – ೧೯೦

ಆ) ೧) ಆಂಗ್ಲ ಶೀಘ್ರಲಿಪಿ ಪ್ರವೀಣ ದರ್ಜೆ – ೫

೨) ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ – ೦೦

ಇ) ೮೩ ಅಭ್ಯರ್ಥಿಗಳು ಈ ಪತ್ರಿಕೆಗೆ ಉತ್ತರಿಸಿದ್ದು ಇವರ ಪೈಕಿ ೧೦ ಅಭ್ಯರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಪರೀಕ್ಷೆಯಲ್ಲಿ ಉತ್ತೀರ್ಣ ಅಥವಾ ಅನುತ್ತೀರ್ಣರಾಗುವುದು ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಗೆ ಉತ್ತರಿಸುವುದರ ಮೇಲೆ ಅವಲಂಬಿಸಿರುತ್ತದೆ.

ಈ) ಇದು ನಿಜವಲ್ಲ.

ಉ) ಪರಿಣಿತರ ಸಮಿತಿಯು ನಿಗದಿಪಡಿಸಿರುವ ನಿಯಮಗಳ ಪ್ರಕಾರ ಮೌಲ್ಯಮಾಪನ ಮಾಡಲಾಗುವುದು.

ಊ) ಅಭ್ಯರ್ಥಿಗಳು ಪ್ರಶ್ನೆ ಪತ್ರಿಕೆಗಳಿಗೆ ಉತ್ತರಿಸುವುದರ ಮೇಲೆ ತೇರ್ಗಡೆ ಅವಲಂಬಿಸಿರುತ್ತದೆ ಪ್ರಾಯಶ: ಕನ್ನಡ ಶೀಘ್ರಲಿಪಿ ಪ್ರವೀಣ ದರ್ಜೆ ಅಭ್ಯರ್ಥಿಗಳು ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸ ಬಹುದು.

ರಾಜ್ಯದಲ್ಲಿ ತಾಂತ್ರಿಕ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳ ಬಗ್ಗೆ

೧೬೬೭. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) — ಮಾನ್ಯ ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ತಿಳಿಸುವರೇ ?

ಅ) ರಾಜ್ಯದಲ್ಲಿನ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಓದುತ್ತಿರುವವರ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಆ) ಸದರಿ ವಿದ್ಯಾರ್ಥಿಗಳಿಗೆ ತಗಲುವ ವಿರ್ಚಿನ ಮೊತ್ತವೆಷ್ಟು ?

ಶ್ರೀ ಹೆಚ್.ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ವಯಸ್ಕರ ಶಿಕ್ಷಣ ರಾಜ್ಯ ಸಚಿವರು).

ಅ) ಪ್ರಾಥಮಿಕ ಶಾಲೆಗಳಲ್ಲಿ ೫೬.೫೬ ಲಕ್ಷ
ಪ್ರೌಢಶಾಲೆಗಳಲ್ಲಿ ೯.೨೨ ಲಕ್ಷ

ಆ) (ರೂ. ಕೋಟಿಗಳಲ್ಲಿ)

ಪ್ರಾಥಮಿಕ ಶಿಕ್ಷಣಕ್ಕೆ ರೂ. ೨೫೦-೦೦
ಪ್ರೌಢ ಶಿಕ್ಷಣಕ್ಕೆ ರೂ. ೯೫-೪೩

ಶಿವಮೊಗ್ಗ ಜಿಲ್ಲೆ ಚನ್ನಗಿರಿ ತಾಲ್ಲೂಕಿನ ಜೀತದಾಳುಗಳಿಗೆ ಪರಿಹಾರ ಕೊಡುವ ಬಗ್ಗೆ

೧೦೮೨. ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) — ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೇ ?

ಅ) ಶಿವಮೊಗ್ಗ ಜಿಲ್ಲೆ ಚನ್ನಗಿರಿ ತಾಲ್ಲೂಕಿನಲ್ಲಿ ಸರ್ಕಾರದವರು ಬಿಡುಗಡೆ ಮಾಡಿರುವ ಜೀತ ದಾಳುಗಳ ಸಂಖ್ಯೆ ಎಷ್ಟು ?

ಆ) ಈವರಗೆ ಎಷ್ಟು ಜನ ಜೀತದಾಳುಗಳಿಗೆ ಪರಿಹಾರ ಕೊಡಲಾಗಿದೆ ?

ಇ) ಉಳಿದ ಜೀತದಾಳುಗಳಿಗೆ ಈವರೆಗೆ ಪರಿಹಾರ ಕೊಡದಿರಲು ಕಾರಣವೇನು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ರಾಜ್ಯ ಮಂತ್ರಿಗಳು).—

ಅ) ೧೯೭೫-೭೬ನೇ ಸಾಲಿನಲ್ಲಿ ೨,೦೦೦ ಜೀತದಾಳುಗಳನ್ನು ವಿಮುಕ್ತಿ ಗೊಳಿಸಲಾಗಿದೆ.

ಆ) ೧೯೭೯-೮೦ರಿಂದ ಜನವರಿ ೧೯೮೬ರ ವರೆಗೆ ಒಟ್ಟು ೧,೨೫೭ ಜೀತ ವಿಮುಕ್ತರನ್ನು ಪುನರ್ವಸತಿಗೊಳಿಸಲಾಗಿದೆ.

ಇ) ಮರು ತನಿಖೆಯಲ್ಲಿ ಕೆಲವು ಅಭ್ಯರ್ಥಿಗಳು ಅನರ್ಹರೆಂದು ಕಂಡು ಬಂದಿದ್ದರಿಂದ ಮತ್ತು ಇನ್ನು ಕೆಲವರು ಊರಿನಲ್ಲಿ ಇಲ್ಲದಿರುವುದರಿಂದ ಅಂಥವರನ್ನು ಕೈಬಿಡಲಾಗಿದೆ.